## ರೈತರ ಕಬ್ಬಿಗೆ ನೀಡಬೇಕಾದ ಬಾಕಿ ಹಣ

691- ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ ನಗರ) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ವಿವಿಧ ಖಾಸಗಿ ಹಾಗೂ ಸಹಕಾರಿ ಸರ್ಕಾರದ ಸಕ್ಕರೆ ಕಾರ್ಖಾನೆಗಳು ರೈತರು ಸರಬರಾಜು ಮಾಡಿರುವ ಕಬ್ಬಿಗೆ ನೀಡಬೇಕಾದ ಬಾಕಿ ಮೊತ್ತವೆಷ್ಟು?*

ಆ) *ಈ ಪೈಕಿ ಯಾವ ಯಾವ ಕಾರ್ಖಾನೆಗಳಿಗೆ ರೈತರ ಕಬ್ಬಿನ ಬಾಕಿ ಪಾವತಿ ಮಾಡಲು ಸರ್ಕಾರ ಸಾಲ ಬಿಡುಗಡೆ ಮಾಡಿದೆ. ಈ ಸಾಲ ನೀಡಿದ ನಂತರವೂ ರೈತರ ಬಾಕಿ ಸರಿಯಾಗಿ ಪಾವತಿ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ರೈತರ ಬಾಕಿ ಪಾವತಿಸಲು ಏನು ಕ್ರಮ ಕೈಗೊಳ್ಳಲಾಗಿದೆ?*

ಶ್ರೀ ಉಮೇಶ್ ವಿ. ಕತ್ತಿ (ಸಕ್ಕರೆ ಸಚಿವರು) :

ಅ) ರೂ. 85.91 ಕೋಟಿ.

ಆ) ಅಳಂದ ಸಹಕಾರಿ ಸಕ್ಕರೆ ಕಾರ್ಖಾನೆ ಮತ್ತು ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬಿನ ಬಿಲ್ ಬಾಕಿ ಪಾವತಿಸಲು ಸರ್ಕಾರವು ಸಾಲ ಬಿಡುಗಡೆ ಮಾಡಿದೆ. ಈ ಸಾಲವನ್ನು ಕಬ್ಬಿನ ಬಿಲ್ ಬಾಕಿ ಪಾವತಿಸಲು ಬಳಸಿದ ನಂತರವೂ ಸದರಿ ಕಾರ್ಖಾನೆಗಳಲ್ಲಿ ರೈತರಿಗೆ ಕೂಡ ಬೇಕಾದ ಬಾಕಿ ಉಳಿದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಕಬ್ಬು ನುರಿಸುತ್ತಿರುವ ಈ ಚಾಲ್ತಿ ವರ್ಷದ ಬಾಕಿ ಸುಮಾರು ರೂ. 67.00 ಕೋಟಿ ಸೇರಿದ್ದು ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ಪಾವತಿಸುತ್ತಾ ಬರುತ್ತಿವೆ. ಹಿಂದಿನ ಬಾಕಿ ಉಳಿಸಿಕೊಂಡಿರುವ ಕಾರ್ಖಾನೆಗಳೂ ಸೇರಿ ಎಲ್ಲಾ ಕಾರ್ಖಾನೆಗಳೂ ಕಬ್ಬು ಸರಬರಾಜು ಮಾಡಿದ ರೈತರಿಗೆ ಬಾಕಿಯನ್ನು ವಿಳಂಬವಿಲ್ಲದೆ ಪಾವತಿಸುವಂತೆ ಸೂಚನೆ ನೀಡಲಾಗಿದೆ.

## ಮೈಸೂರು ಪೇಪರ್ ಮಿಲ್‌ನಲ್ಲಿ ಕಚ್ಚಾ ವಸ್ತು ತಯಾರಿಕೆಗೆ ಅರಣ್ಯ ಬೆಳೆಸುವುದು

693 - ಶ್ರೀ ಚಂದ್ರಕಾಂತ್ ಬೆಲ್ಲದ್ (ಧಾರವಾಡ ನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೈಸೂರು ಪೇಪರ್ ಮಿಲ್ಸ್ ಕಚ್ಚಾ ವಸ್ತು ತಯಾರಿಕೆಗಾಗಿ ಎಷ್ಟು ಎಕರೆ ಅರಣ್ಯವನ್ನು ಬೆಳೆಸುತ್ತಿದೆ, ಎಲ್ಲೆಲ್ಲಿ ಯಾವ ಗ್ರಾಮಗಳಲ್ಲಿ ಬೆಳೆಸಲಾಗುತ್ತಿದೆ?*

ಆ) *ಎಷ್ಟು ವರ್ಷಗಳಿಂದ ಅರಣ್ಯವನ್ನು ಬೆಳೆಸಲಾಗುತ್ತಿದೆ, ಇದುವರೆವಿಗೂ ಎಷ್ಟು ಹಣವನ್ನು ತೊಡಗಿಸಲಾಗಿದೆ, ಎಷ್ಟು ಕಚ್ಚಾ ವಸ್ತುವನ್ನು ತಯಾರಿಸಲಾಗಿದೆ?*

ಇ) *ಅರಣ್ಯ ಬೆಳೆಸುವ ಕಾರ್ಯದಲ್ಲಿ ಉತ್ತಮ ಫಲಿತಾಂಶ ಲಭ್ಯವಾಗಿದೆಯೇ ಯಾವ ರೀತಿಯ ಫಲಿತಾಂಶ ದೊರೆತಿದೆ, ಇದರಿಂದಾಗಿ ಕಂಪನಿಗೆ ಆಗಿರುವ ಆರ್ಥಿಕ ಲಾಭ ಎಷ್ಟು, ಬೇರೆ ಯಾವ ರೀತಿಯ ಅನುಕೂಲಗಳು ಇದರಿಂದಾಗಿವೆ; ಮಾಹಿತಿ ನೀಡುವುದು?*